ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ : ಸಿ5(5) ಹಿ.ಬೆ. ಬಡ್ತಿ-21/2020-21 ದಿನಾಂಕ :20-11-2020

ಜ್ಞಾ ಪ ನ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆರಳಚ್ಚುಗಾರರ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಿರಿಯ ಬೆರಳಚ್ಚುಗಾರರ ವೃಂದಕ್ಕೆ ಮೇಲ್ದರ್ಜೆಗೇರಿಸುವ ಕುರಿತು.

ಉಲ್ಲೇಖ :-1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ 66 ಎಸ್ ಆರ್ ಪಿ 84 ದಿನಾಂಕ : 17-12-1981.

2. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಸಿ5(5) ಬೆ.ಜೇ.ಪ-56/2019-20 ದಿನಾಂಕ: 26-05-2020

* * * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ವಿವಿಧ ಕಛೇರಿಗಳಲ್ಲಿ ಖಾಲಿ ಇರುವ ಬೆರಳಚ್ಚುಗಾರರ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಿರಿಯ ಬೆರಳಚ್ಚುಗಾರರ ವೃಂದಕ್ಕೆ ಸೇವಾ ಜೇಷ್ಠತೆ ಆಧಾರದ ಮೇಲೆ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. ಜೇಷ್ಠತಾ ಪಟ್ಟಿಯ ಅರ್ಹ ಬೆರಳಚ್ಚುಗಾರರ ವಿವರಗಳು ಕೆಳಗಿನಂತಿದೆ. ಎಲ್ಲಾ ಕಛೇರಿ ಮುಖ್ಯಸ್ಥರುಗಳು ಪಟ್ಟಿಯಲ್ಲಿನ ತಮ್ಮ ವ್ಯಾಪ್ತಿಯ ಬೆರಳಚ್ಚುಗಾರರಿಗೆ ಸಂಬಂಧಿಸಿದಂತೆ ಕೆಳಕಂಡ ಮಾಹಿತಿ/ದಾಖಲೆಗಳನ್ನು ಆದ್ಯತೆ ಮೇರೆಗೆ ಕಳುಹಿಸಿಕೊಡಲು ಸೂಚಿಸಿದೆ.

| ಕ್ರ ಸಂ | ಜೇಷ್ಠತಾ ಸಂಖ್ಯೆ | ನೌಕರರ ಹೆಸರು ಶ್ರೀಮತಿ/ಶ್ರೀ | ವರ್ಗ |
|---|---|---|---|
| 1 | 166 | ನರಸಿಂಹಯ್ಯ ಕೆ.ವಿ | ಇತರೆ |
| 2 | 169 | ಪಿ. ಶಶಿಕಲಾ | ಇತರೆ |
| 3 | 180 | ಬಿಪಿ ಮಮತ | ಇತರೆ |
| 4 | 182 | ವಿಶ್ವನಾಥ ದೊಡ್ಡಮನಿ | ಇತರೆ |
| 5 | 183 | ಹನುಮಂತಪ್ಪ ಬಾಳಪ್ಪ ಹಿರೇಗೊಂಡ | ಇತರೆ |
| 6 | 185 | ಟಿ.ರಮಾಮಣಿ | ಇತರೆ |

1. 2015-16 ರಿಂದ 2019-2020 ನೇ ಸಾಲಿನವರೆಗಿನ ನೌಕರರ ಕಾರ್ಯ ನಿರ್ವಹಣಾ ವರದಿಗಳು (ಪ್ರತಿ ಕಾರ್ಯ ನಿರ್ವಹಣಾ ವರದಿಗೆ ಪರಿಶೀಲನಾಧಿಕಾರಿಗಳ ಅಂಗೀಕಾರ ಮನರಾವಲೋಕನ ಪ್ರಾಧಿಕಾರದ ದೃಢೀಕರಣ ಹಾಗೂ ಅಂಗೀಕಾರ ಪಡೆದು ಸಲ್ಲಿಸುವುದು.)
2. ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ ಪ್ರಮಾಣ ಪತ್ರ ಅಥವಾ ವಿನಾಯ್ತಿ ಪ್ರಮಾಣ ಪತ್ರ [ನಮೂನೆ5(5) ರ ದೃಢೀಕೃತ ಪ್ರತಿಯೊಂದಿಗೆ]
3. ಸಂಬಂಧಿಸಿದ ನೌಕರರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯಾಗಲೀ / ನ್ಯಾಯಾಂಗ ಪ್ರಕರಣವಾಗಲೀ ಬಾಕಿ ಇಲ್ಲದೇ ಇರುವ ದೃಢೀಕರಣ ಪತ್ರ.[ ಇಲಾಖಾ ವಿಚಾರಣೆಯಾಗಲೀ / ನ್ಯಾಯಾಂಗ ಪ್ರಕರಣವಾಗಲೀ ಬಾಕಿ ಇದ್ದಲ್ಲಿ ಸಂಪೂರ್ಣ ವಿವರ]
4. ನೌಕರರು ಪ.ಜಾತಿ / ಪ. ಪಂಗಡಕ್ಕೆ ಸೇರಿದವರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ ಪ್ರತಿ.
5. ಈ ಪತ್ರದೊಂದಿಗೆ ನೀಡಲಾಗಿರುವ ನಮೂನೆಯಲ್ಲಿ ನೌಕರರ ಸೇವಾ ವಿವರ.

30 ಪ್ರತಿ ಸಿಬ್ಬಂದಿವಾರು ಮಾಹಿತಿ / ದಾಖಲೆಗಳನ್ನು ಒಳಗೊಂಡಿರುವ ಪ್ರಸ್ತಾವನೆಯನ್ನು ದಿನಾಂಕ: **~~28~~/11/2020** ರೊಳಗಾಗಿ ಸಹಾಯಕ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. ಇವರಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ಅಲ್ಲದೆ, ಈ ಪಟ್ಟಿಯಲ್ಲಿನ ಬೆರಳಚ್ಚುಗಾರರನ್ನು ಹೊರತುಪಡಿಸಿ ಇತರ ಅರ್ಹ ಬೆರಳಚ್ಚು ಸಿಬ್ಬಂದಿಗಳು ಇದ್ದಂತಹ ಪಕ್ಷದಲ್ಲಿ ಅಂತಹವರ ಮಾಹಿತಿಯನ್ನು ಸಹ ಸಲ್ಲಿಸುವುದು.

[ಸಿರಿಯಣ್ಣವರ ಲಲಿತಾ ಚಂದ್ರಶೇಖರ್]
ನಿರ್ದೇಶಕರು [ಆಡಳಿತ][ಹೆ.ಪ್ರ]

**ಇವರಿಗೆ:**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
2. ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು.
3. ಪ್ರಾಂಶುಪಾಲರು/ಸಿಟಿಇ, ಮೈಸೂರು/ಚಿತ್ರದುರ್ಗ/ಮಂಗಳೂರು.
4. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು(ಆಡಳಿತ) ಹಾಗೂ ಉಪ ನಿರ್ದೇಶಕರುಗಳು(ಅಭಿವೃದ್ಧಿ)
5. ಕಛೇರಿ ಪ್ರತಿ.